

# ಫ್ರೆಷ್ ಪ್ರಿನ್ಸ್‌ನ ತಾಜಾ ವಿವಾದ!

■ ಪ್ರವೀಣ ಕುಲಕರ್ಣಿ

ಲಾಸ್ ಏಂಜಲೀಸ್‌ನ ಆ ವರ್ಣರಂಜಿತ ಸಮಾರಂಭದ ವೇದಿಕೆಯಲ್ಲಿ ಹಾಸ್ಯ ಕಲಾವಿದ ಕ್ರಿಸ್ ರಾಕ್ ಅವರ ಕೆನ್ನೆಗೆ ಬಿದ್ದ ಏಟಿನ ಸದ್ದನ್ನು ಇಡೀ ಜಗತ್ತು ಕೇಳಿಸಿಕೊಂಡಿದೆ. ಈ ಸ್ಲ್ಯಾಪ್‌ಗೇಟ್ ಘಟನೆಯ ಬಳಿಕ ಗೂಗಲ್‌ನಲ್ಲಿ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಕೇಳಿ ಬರುತ್ತಿರುವ ಪ್ರಶ್ನೆಗಳಲ್ಲಿ 'ವಿಲ್ ಸ್ಮಿತ್ ಅವರಿಗೆ ಕೊಟ್ಟ ಆಸ್ಕರ್ ಪ್ರಶಸ್ತಿಯನ್ನು ವಾಪಸ್ ಪಡೆಯಲಾಗುವುದೇ' ಎನ್ನುವುದೂ ಒಂದಾಗಿದೆ.

ಸೆಲೆಬ್ರಿಟಿಯಾಗಿ ಸಂಭ್ರಮಿಸುವ ಹೊತ್ತಿನಲ್ಲೇ 'ಖಳನಾಯಕನಾಗಿ ನಿಲ್ಲಬೇಕಾದ ವಿಚಿತ್ರ ಸನ್ನಿವೇಶ ಸ್ಮಿತ್ ಅವರದು. ಲಾಸ್ ಏಂಜಲೀಸ್‌ನಲ್ಲಿ ಕಳೆದ ವಾರ ನಡೆದಿದ್ದು 94ನೇ ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭ. ಅಮೆರಿಕದ ಹೆಸರಾಂತ ನಟ, ರ್‍ಯಾಪರ್, ಚಿತ್ರ ನಿರ್ಮಾಪಕ ಸ್ಮಿತ್ 'ಅತ್ಯುತ್ತಮ ನಟ'ನಾಗಿ ಹೊರಹೊಮ್ಮಿದರು. ಅವರ ಪಾಲಿಗಿದು ಮೊದಲ ಆಸ್ಕರ್ ಪ್ರಶಸ್ತಿ. ಆದರೆ, ಟ್ರೋಫಿಗೆ ಮುತ್ತಿಕ್ಕುವ ಮುನ್ನವೇ ನಡೆದ ಸ್ಲ್ಯಾಪ್‌ಗೇಟ್ ಘಟನೆಯಿಂದ ವಿವಾದಕ್ಕೆ ಒಳಗಾದರು.

ಅತ್ಯುತ್ತಮ ಸಾಕ್ಷ್ಯಚಿತ್ರ ಪ್ರಶಸ್ತಿಯ ಘೋಷಣೆ ಮಾಡಲು ವೇದಿಕೆಗೆ ಬಂದಿದ್ದ ರಾಕ್, ಪ್ರಶಸ್ತಿ ಘೋಷಣೆ ಮಾಡುವುದಕ್ಕೂ ಮುನ್ನ ಸ್ಮಿತ್ ಅವರ ಪತ್ನಿ ಜೇಡ ಪಿಂಕೆಟ್ ಅವರ ಕುರಿತು ನಗೆ ಚಟಾಕಿ ಹಾರಿಸಿದರು. ಕೂದಲು ಉದುರುವಿಕೆಯ ಕಾಯಿಲೆಯಿಂದ (ಅಲೊಪೀಸಿಯಾ) ಬಳಲುತ್ತಿರುವ ಜೇಡ ಅವರ ಬೋಳು ತಲೆಯನ್ನು ಉದ್ದೇಶಿಸಿ ರಾಕ್ ಸಿಡಿಸಿದ ಜೋಕ್‌ನಿಂದ ಸ್ಮಿತ್ ಅವರ ಸಿಟ್ಟು ಹೇಗೆ ನೆತ್ತಿಗೇರಿತ್ತೆಂದರೆ, ಸರಬರನೆ ವೇದಿಕೆ ಏರಿದ ಅವರು ರಾಕ್ ಕೆನ್ನೆಗೆ ಬಾರಿಸಿಯೇಬಿಟ್ಟರು. ಈ ಘಟನೆಯ ಬಳಿಕ ಸ್ಮಿತ್ ಪರ ಹಾಗೂ ವಿರೋಧದ ಟ್ವೀಟ್ ಪ್ರವಾಹವೇ ಹರಿದಾಡಿತು. 'ಸಮಾರಂಭದಲ್ಲಿ ನಾನು ಹಾಗೆ ನಡೆದುಕೊಳ್ಳಬಾರದಿತ್ತು' ಎಂದು ಸ್ಮಿತ್ ವಿಷಾದದ ಧ್ವನಿಯಲ್ಲಿ ಹೇಳಿರುವುದೂ ಸುದ್ದಿಯಾಯಿತು.

'ದಿ ಫ್ರೆಷ್ ಪ್ರಿನ್ಸ್' ಎಂದೇ ಹೆಸರಾದ ಸ್ಮಿತ್, ನಿಜಕ್ಕೂ ಹಾಲಿವುಡ್‌ನಲ್ಲಿ ರಾಜನಾಗಿ ಮೆರೆಯುತ್ತಿರುವ ಕಲಾವಿದ. ಆಸ್ಕರ್ ಪ್ರಶಸ್ತಿಯಲ್ಲದೆ ಬ್ರಿಟಿಷ್ ಅಕಾಡೆಮಿ, ಗೋಲ್ಡನ್ ಗ್ಲೋಬ್, ಸ್ಕ್ರೀನ್ ಆ್ಯಕ್ಟರ್ಸ್ ಗಿಲ್ಡ್, ಗ್ರ್ಯಾಮಿ ಪುರಸ್ಕಾರಗಳಿಗೂ ಪಾತ್ರವಾಗಿರುವ ಸ್ಮಿತ್, ಬಾಕ್ಸ್ ಆಫೀಸಿನಲ್ಲಿ ದಾಖಲೆ ಬರೆದ ಹಲವು ಚಿತ್ರಗಳನ್ನು ಕೊಟ್ಟವರು. 2021ರಲ್ಲಿಯೇ ಅವರ ಚಿತ್ರಗಳ ಒಟ್ಟು ಗಳಿಕೆ 930 ಕೋಟಿ ಡಾಲರ್ (70.46 ಸಾವಿರ ಕೋಟಿ ರೂಪಾಯಿ) ದಾಟಿತ್ತು. ಚಿತ್ರರಂಗದಲ್ಲಿ ಮಿಂಚುವ ಮುನ್ನ ಅವರು ರ್‍ಯಾಪ್‌ನಲ್ಲಿ ಹೆಸರು ಮಾಡಿದ್ದರು. 'ಬಿಗ್ ವಿಲ್ಲಿ ಸ್ಟೈಲ್', 'ವಿಲೇನಿಯಮ್', 'ಬಾರ್ನ್ ಟು ರೇನ್', 'ರಿಂಗ್ ಮೈ ಬೆಲ್' ಮೊದಲಾದ ಆಲ್ಬಂಗಳಿಂದ ಜನಪ್ರಿಯತೆ ಗಳಿಸಿದವರು.

'ವೇರ್ ದಿ ಡೇ ಟೇಕ್ಸ್ ಯು' ಅವರು ಅಭಿನಯಿಸಿದ ಮೊದಲ ಚಿತ್ರ. ಅಪರಾಧ ಜಗತ್ತಿನ ಕಥೆಯನ್ನು ಹೊಂದಿದ್ದ ಈ ಚಿತ್ರದ ಅಭಿನಯದ ನಂತರ ಅವರು ಹಿಂದಿರುಗಿ ನೋಡಲಿಲ್ಲ. 'ಬ್ರೈಟ್', 'ಮೆನ್ ಇನ್ ಬ್ಲ್ಯಾಕ್–3', 'ಕಿಂಗ್ ರಿಚರ್ಡ್' ಚಿತ್ರಗಳು ಅವರಿಗೆ ತುಂಬಾ ಖ್ಯಾತಿಯನ್ನು ತಂದುಕೊಟ್ಟವು. ಟೆನಿಸ್ ಅಂಗಳದಲ್ಲಿ ದಂತಕಥೆಯಾಗಿ ಬೆಳೆದ ಸೆರೆನಾ ಮತ್ತು ವೀನಸ್ ವಿಲಿಯಮ್ಸ್ ಅವರ ಬದುಕಿನ ಕಥೆಯನ್ನು 'ಕಿಂಗ್ ರಿಚರ್ಡ್' ಚಿತ್ರ ತೆರೆದಿಟ್ಟಿದೆ. ಸೆರೆನಾ ಮತ್ತು ವೀನಸ್ ಸಹೋದರಿಯರ ತಂದೆ ರಿಚರ್ಡ್ ವಿಲಿಯಮ್ಸ್ ಅವರ ಪಾತ್ರದಲ್ಲಿ ಸ್ಮಿತ್ ಕಾಣಿಸಿಕೊಂಡಿದ್ದಾರೆ. ಆ ಚಿತ್ರದ ಅಭಿನಯಕ್ಕಾಗಿಯೇ ಆಸ್ಕರ್ ಪ್ರಶಸ್ತಿ ಒಲಿದುಬಂದಿದೆ.

ಸ್ಮಿತ್ ಅವರಿಗೆ ಜೇಡ ಮೊದಲ ಪತ್ನಿಯೇನೂ ಅಲ್ಲ. ಮೊದಲು ಕಲಾವಿದೆ ಶೀರಿ ಜಾಂಪಿನೊ ಅವರನ್ನು ವರಿಸಿದ್ದ ಸ್ಮಿತ್, ಬಳಿಕ ಅವರಿಂದ ವಿಚ್ಛೇದನ ಪಡೆದಿದ್ದರು. ಆ ಜೋಡಿಗೆ ಒಬ್ಬ ಮಗನಿದ್ದಾನೆ. ನಂತರ ಜೇಡ ಅವರನ್ನು ಸ್ಮಿತ್ ಮದುವೆಯಾದರು. ಅವರಿಗೆ ಒಬ್ಬ ಮಗ ಹಾಗೂ ಮಗಳು ಇದ್ದಾರೆ. ಸ್ಮಿತ್–ಜೇಡ ನಡುವಿನ ದಾಂಪತ್ಯ ಗಟ್ಟಿಯಾಗಿದ್ದರೂ ಇಬ್ಬರೂ ವಿವಾಹೇತರ ಸಂಬಂಧವನ್ನು ಸಹ ಹೊಂದಿದ್ದಾರೆ. ಅದನ್ನು ಇಬ್ಬರೂ ಮುಕ್ತವಾಗಿಯೇ ಹೇಳಿಕೊಂಡಿದ್ದಾರೆ. 'ನಮ್ಮದು ಗಟ್ಟಿ ದಾಂಪತ್ಯ, ಆದರೆ, ಸ್ವತಂತ್ರ ಹಾದಿ' ಎಂದು ಸಾರಿದ್ದಾರೆ.

ಸಂದರ್ಭ ಬಂದಾಗಲೆಲ್ಲ ತಮ್ಮ ರಾಜಕೀಯ ಒಲವುಗಳ ಕುರಿತೂ ಮುಕ್ತ ಅಭಿಪ್ರಾಯವನ್ನು ಅಭಿವ್ಯಕ್ತಿಸುತ್ತಾ ಬಂದಿರುವ ಸ್ಮಿತ್, ಬರಾಕ್ ಒಬಾಮಾ ಪರ ಚುನಾವಣಾ ಪ್ರಚಾರಕ್ಕಾಗಿ ದೊಡ್ಡ ಮೊತ್ತದ ಹಣವನ್ನೂ ಖರ್ಚು ಮಾಡಿದವರು. ಒಬಾಮಾ ಅವರಿಗೆ ನೊಬೆಲ್ ಶಾಂತಿ ಪುರಸ್ಕಾರ ಸಿಕ್ಕಾಗ ಸಂಗೀತ ಕಛೇರಿಯನ್ನೂ ನಡೆಸಿಕೊಟ್ಟವರು. ಸಲಿಂಗ ಮದುವೆಯನ್ನು ಕಾನೂನುಬದ್ಧಗೊಳಿಸಬೇಕು ಎಂಬ ಆಂದೋಲನದ ಪರವಾಗಿ ಧ್ವನಿಗೂಡಿಸಿದವರು. ಹೀಗೆ ಭಿನ್ನ ಆಲೋಚನೆಯ, ಭಿನ್ನ ವ್ಯಕ್ತಿತ್ವದ 'ಫ್ರೆಷ್ ಪ್ರಿನ್ಸ್', ಜಗತ್ತೇ ಕಣ್ಣೆಟ್ಟು ನೋಡುತ್ತಿದ್ದ ವೇದಿಕೆಯಲ್ಲಿ ಎಡವಿ ತಾಜಾ ವಿವಾದವನ್ನು ಮೈಮೇಲೆ ಎಳೆದುಕೊಂಡಿದ್ದು ಅವರ ಪತ್ನಿ ಜೇಡ ಅವರಿಗೂ ನೋವು ತಂದಿದೆ. ಅಂದಹಾಗೆ, ಕಪಾಳಮೋಕ್ಷಕ್ಕೆ ಒಳಗಾದ ರಾಕ್, ಒಂದುಕಾಲದಲ್ಲಿ ಸ್ಮಿತ್ ದಂಪತಿಯ ಸ್ನೇಹಿತನಾಗಿದ್ದವರು! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65